**ದಿನಾಂಕ 09-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಅನುಮತಿಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಸಾಕ್ಷಿಗೆ ನಿಪಿ-70 ರಿಂದ 104 ನ್ನು ತೋರಿಸಲಾಗಿ, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯು ನಿಪಿ-70 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-70 ಬಿ ಎಂದು ಗುರುತಿಸಲಾಯಿತು. ನಿಪಿ-70 ರೊಂದಿಗೆ ಚಾಸಾ-1 ರವರು ನಿಪಿ-71 ರಿಂದ 103 ರ ದಾಖಲೆಗಳನ್ನು ಕೊಟ್ಟಿದ್ದರು.

ಬ್ಯಾಂಕ್ ಮ್ಯಾನೇಜರ್ ರವರು ಸಿಸಿ ಕ್ಯಾಮೆರಾ ಫುಟೇಜ್ & ಸಿಡಿ, ಕಂಪನಿಯ ಬೈಲಾವನ್ನು ತಂದು ಕೊಡುತ್ತೇನೆಂದು ಹೇಳಿದ್ದು, ಆದರೆ ಹಾಜರುಪಡಿಸಿರುವುದಿಲ್ಲ.

**ಮುಂದುವರೆದ ಪಾಟೀಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ**

13. ಗೋಲ್ಡ್ ಲೋನ್ ಅಕೌಂಟ್, ಜಾಯಿಂಟ್ ಕಸ್ಟಡಿ ಆಫ್ ಅಕೌಂಟ್ ಇವೆರಡೂ ಕೆಲಸಗಳನ್ನು ನಿರ್ವಹಿಸಬೇಕೆಂದರೆ ಬ್ಯಾಂಕ್ ಮ್ಯಾನೇಜರ್ ರವರು ಅಧಿಕಾರ ನೀಡಿದರೆ ಮಾತ್ರ ಕೆಲಸ ನಿರ್ವಹಿಸಬೇಕೆಂದು ನಿಪಿ-46 ರಲ್ಲಿ ನಮೂದು ಇದೆ ಎಂದರೆ ಸರಿ. ಇದಕ್ಕೆ ಸಂಬಂಧಿಸಿದಂತೆ ನಾನು ಬ್ಯಾಂಕ್ ಮ್ಯಾನೇಜರ್ ರವರಿಂದ ಯಾವುದೇ ದಾಖಲೆಯನ್ನು ಪಡೆದಿಲ್ಲ. ಸಾಕ್ಷಿಯು ಮುಂದುವರೆದ ಅಧಿಕಾರ ಕೊಟ್ಟಂತೆ ನಿಪಿ-47 ರಲ್ಲಿ ನಮೂದು ಇದೆ ಎಂದು ನಿಪಿ-47 ನ್ನು ಸಾಕ್ಷಿಯು ತೋರಿಸಿರುತ್ತಾರೆ. ನೀವು ಯಾವುದೇ ದಾಖಲೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲುಃ 2 ನೇ ಆರೋಪಿ ಪರ ವಕೀಲರಿಂದಃ**

2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು, ಅನುಮತಿಸಲಾಯಿತು & 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**